**SREE SIDDAGANGA COLLEGE OF ARTS, SCIENCE AND COMMERCE**
B.H. ROAD, TUMKUR 572 102, e-mail: 3by4ncc.sscasc@gmail.com
**4 KARNATAKA BN NCC, 3/4 COMPANY**

# SOCIAL SERVICE AND COMMUNITY DEVELOPMENT ACTIVITY 2020-21

# COVID - 19 REPORT

1. Unit Name : **3/4 COMPANY, 4 KARNATAKA BN NCC, S.S. COLLEGE, TUMKUR**
2. Wing : **Army**
3. Vision : To be a leading organization of youth in bringing out the best in our students through a trained disciplined life.
4. Mission : To develop resourceful, responsible, resilient, loyal leaders and team players through sport and challenging military- related activities
5. Goals :To bring out the best in our cadets to participate in parades and various camps which are held on numerous occasions. To infuse defense consciousness among the youth.
6. Coy Commander : **Lt. Ramalinga Reddy S**, *Associate NCC Officer*
7. : Authorized Strength : **108**
8. : Enrolled Strength : **108**

| S.N. | NAME OF DIVISION (ARMY) | STRENGTH | PARTICIPATED IN COVID-19 AS A WARRIORS |
|---|---|---|---|
| 01 | Senior Division | 68 | 27+01 ANO |
| 02 | Senior Wings | 40 | 06 + 01 Principal |

# ಕೊರೋನಾ ಸೇನಾನಿಯಾಗಿ



**ಲೆಫ್ಟಿನೆಂಟ್ ರಾಮಲಿಂಗರೆಡ್ಡಿ ಎಸ್.**
ಸಹಾಯಕ ಪ್ರಾಧ್ಯಾಪಕರು ಮತ್ತು ಎನ್.ಸಿ.ಸಿ. ಅಧಿಕಾರಿಗಳು
ಶ್ರೀ ಸಿದ್ಧಗಂಗಾ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ತುಮಕೂರು.

## ಕೊರೋನಾ ವಿರುದ್ಧದ ಜಾಗೃತಿ ಕಾರ್ಯ

ಪ್ರಸ್ತುತ ಜಗತ್ತನ್ನೆ ಕಾಡುತ್ತಿರುವ ಕೊರೊನಾ ಎಂಬ ಮಹಾಮಾರಿ ವೈರಸ್ ನಮ್ಮ ದೇಶದಲ್ಲೂ ರುದ್ರನರ್ತನ ಮಾಡುತ್ತಿದ್ದು ಇಂತಹ ಕಾಯಿಲೆಗೆ ಸದ್ಯಕ್ಕೆ ಔಷದವೇ ಇಲ್ಲದ ಕಾರಣ ಕರೋನಾ ವೈರಸ್ ಎದುರಿಸಲು ಇರುವ ಏಕೈಕ ಮಾರ್ಗವೆಂದರೆ ಮುನ್ನೆಚ್ಚರಿಕೆ, ದೇಶದಲ್ಲಿ ಕರೊನ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು ಮುಂಜಾಗೃತ ಕ್ರಮಗಳನ್ನು ಅನುಸರಿಸುವ ಮೂಲಕ ನಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕಾಗಿರುವುದು ಅನಿವಾರ್ಯವಾಗಿದೆ. ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರ ಅನೇಕ ಕ್ರಮಗಳನ್ನು ಘೋಷಿಸಿದ್ದು ಅವುಗಳನ್ನು ಪಾಲಿಸಬೇಕಾದ ಕರ್ತವ್ಯ ಪ್ರಜ್ಞಾವಂತ ನಾಗರೀಕರಾದ ನಮ್ಮ ಮೇಲಿದೆ. “ಪ್ರಿವೆನ್ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್” ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ ರೋಗ ಬರದಂತೆ ಎಚ್ಚರಿಕೆ ವಹಿಸುವುದು ಅತ್ಯಂತ ಸೂಕ್ತ ಎಂಬುದು ಮುಂಜಾಗ್ರತೆಯೊಂದೇ ಮಹಾ ಮಂತ್ರ (ಅಸ್ತ್ರ).

ಈಗಾಗಲೇ ತುಮಕೂರಿನಲ್ಲಿ ಎಷ್ಟೆಲ್ಲಾ, ಮುಂಜಾಗ್ರತಾ ಕ್ರಮ ಕೈಗೊಂಡರೂ ಕರೋನಾ ಪೀಡಿತ ಜಿಲ್ಲೆಯ ಾಗಿದ್ದು ವಿಪರ್ಯಾಸವೇ ಸರಿ. ಈ ರೋಗ ಕಾಣಿಸಿಕೊಳ್ಳದಂತೆ ತಡೆಯಲು ನಾಗರೀಕ ಬಂಧುಗಳ ಸಹಕಾರದೊಂದಿಗೆ, ಮಹಾನಗರ ಪಾಲಿಕೆ ನೌಕರರೊಂದಿಗೆ, ಎನ್.ಸಿ.ಸಿ. ವಿದ್ಯಾರ್ಥಿಗಳೊಂದಿಗೆ ಸೇನಾನಿಗಳಂತೆ ನಾಲ್ಕು ತಿಂಗಳಿನಿಂದ ಮನೆಯಿಂದ ಹೊರ ಬಂದು ನಗರದಲ್ಲಿ ಅನೇಕ ಸಂಘ ಸಂಸ್ಥೆಗಳು (ಆರ್.ಆರ್. ಅಭಿಮಾನಿ ಬಳಗ, ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆ, ವಿದ್ಯಾನಗರ ನಾಗರೀಕ ಬಡಾವಣೆ, ಎನ್.ಸಿ.ಸಿ. ಕಾರ್ಯಾಲಯ) ಕೈಗೊಂಡಿರುವ ಸಹಾಯ ಮತ್ತು

ಸಹಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಪೋಲೀಸ್ ಮತ್ತು ವೈದ್ಯಾಧಿಕಾರಿಗಳಿಗೆ ಸಹಕರಿಸುತ್ತಾ ಸಾರ್ವಜನಿಕರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದ್ದೇನೆ.

***ಮಾನ್ಯ ನಾಗರೀಕ ಬಂಧುಗಳಲ್ಲಿ ಮನವಿ ಮಾಡುತ್ತಿರುವುದು***

ಈಗಾಗಲೇ ಗಮನಿಸಿದಂತೆ ಬೆಳಗಿನ ನಿತ್ಯುಪಯುಕ್ತ ಸಾಮಗ್ರಿಗಳಾದ ಹಾಲು, ತರಕಾರಿ, ದಿನಸಿ ಹಾಗೂ ಇತರೆ ಪದಾರ್ಥಗಳನ್ನು ಕೊಳ್ಳಲು ಬರುವ ಅನೇಕ ನಾಗರೀಕರು ಮಾಸ್ಕ ದರಿಸದೇ ಬರುವುದು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದಿರುವುದನ್ನು ಗಮನಿಸಿ ಹಿರಿಯ ಪ್ರಜ್ಞಾವಂತ ನಾಗರೀಕರ ಸಹಕಾರ ದಿಂದ ಜಾಗೃತ ಕಾರ್ಯ ಹಮ್ಮಿಕೊಂಡು ನಾಗರೀಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಯಿತು.

ಇಂದು ನಮ್ಮಗಳ ಜೀವ ಮತ್ತು ಜೀವನದ ಪ್ರಶ್ನೆಯಾಗಿದ್ದು ಎಲ್ಲರೂ ಒಟ್ಟಾಗಿ ಕೊರೋನಾ ವಿರುದ್ಧ ಸಮರ ಸಾರೋಣ. ಆಯಾ ಬಡಾವಣೆ ಜಾಗೃತವಾದರೆ, ನಗರ ಜಾಗೃತವಾದಂತೆ, ನಗರ ಜಾಗೃತವಾದರೆ ರಾಜ್ಯ ಜಾಗೃತವಾದಂತೆ, ರಾಜ್ಯ ಜಾಗೃತವಾದರೆ ದೇಶ ಜಾಗೃತವಾದಂತೆ ತಾಯಿ ಭಾರತಾಂಬೆಯ ಉಳಿವಿಗಾಗಿ ಎಲ್ಲರೂ ಕೊರೋನಾ ವಿರುದ್ಧ ಹೋರಾಡಲು ಕೆಲವು ಅಗತ್ಯ ಕ್ರಮಗಳನ್ನು ಕೈಗೊಳ್ಳೊಣ.


- ಹೊರ ನೆಡೆದರೆ ( ಹಾಲು, ಹಣ್ಣು, ತರಕಾರಿ, ಇತ್ಯಾದಿ) ಮಾಸ್ಕ್ ಧರಿಸೋಣ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳೊಣ.
- ಆಲ್ಕೊಹಾಲ್ ಆಧಾರಿತ ಹ್ಯಾಂಡ್ ಸ್ಯಾನಿಟೈಸರ್ ಅಥವಾ ಸೋಪ್‌ನಿಂದ ಯಾವಾಗಲೂ ಕೈಗಳನ್ನು ತೊಳೆಯೋಣ.
- ವಾಸಸ್ಥಳ ನೆಲ, ಕುಳಿತುಕೊಳ್ಳುವು ಬೆಂಚ್, ಟೆಬಲ್ ಅಡುಗೆಮನೆ ಇತ್ಯಾದಿ ಇವುಗಳನ್ನು ಪದೇ ಪದೇ ಸ್ವಚ್ಛಗೊಳಿಸುತ್ತಿರೋಣ ಮತ್ತು ಸೋಂಕು ರಹಿತಗೊಳಿಸೋಣ.
- **ರೈತರೇ ದೇಶದ ಬೆನ್ನಲುಬು"** ಎಂಬುದನ್ನರಿತ ನಾವುಗಳು ಅವರುಗಳ ಬೆಳೆದ ತರಕಾರಿ, ಹಣ್ಣುಗಳನ್ನು ಹೆಚ್ಚು ಹೆಚ್ಚಾಗಿ ಕೊಂಡು ಉಪಯೋಗಿಸಿ ನಮ್ಮ ದೇಹದಲ್ಲಿ ವೈರಾಣುವಿನ ವಿರುದ್ಧ ಹೋರಾಡುವ ಶಕ್ತಿ ಪಡೆಯೋಣ ಮತ್ತು ರೈತರಿಗೆ ಈ ರೀತಿಯಾಗಿ ಸಹಾಯ ಮಾಡೋಣ.

***"ಬನ್ನಿ ಎಲ್ಲರೂ ಕೊರೋನಾ ವಿರುದ್ಧ ಹೋರಾಡಲು ಕೈ ಜೋಡಿಸೋಣ"***

**NCC 3/4 COY CADETS WORK NEARLY 40 DAYS**

**AS A COVID-19 WORRIERS**

# ಕೊರೋನಾ ಕೊವಿಡ್ – 19 ರಲ್ಲಿ ಅಗತ್ಯ ಸೇವೆಗಳಲ್ಲಿ ಭಾಗವಹಿಸಿದ ಸಂದರ್ಭ




ಕೋವಿಡ್ – 19 ರ ಅಗತ್ಯ ಸೇವೆಗಳಲ್ಲಿ ನಿರತರಾಗಿ ಕಾರ್ಯ ನಿರ್ವಹಿಸಲು ನೀಡಿದ ಗುರುತಿನ ಪತ್ರ. ಮತ್ತು ಎನ್.ಸಿ.ಸಿ ಕಾರ್ಯಾಲಯ ಕೋವಿಡ್–19 ರ ಅಗತ್ಯ ಸೇವೆಗಳಲ್ಲಿ ಹೇಗೆ ಕಾರ್ಯ ನಿರ್ವಹಿಸಬೇಕೆಂದು ತರಬೇತಿ ನೀಡಿದ ಪ್ರಮಾಣ ಪತ್ರ.




ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕೋವಿಡ್–19 ರಿಂದ ತೊಂದರೆಗೀಡಾಗಿದ್ದವರಿಗೆ ಸಂಸ್ಥೆಯ ರಾಜ್ಯ ಸಭಾಪತಿ ಶ್ರೀ ಎಸ್. ನಾಗಣ್ಣ, ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ವಿಶ್ವವಿದ್ಯಾಲಯದ ಉಪಕುಲಪತಿಗಳು ದಿನಸಿ ಕಿಟ್ ಗಳನ್ನ ವಿತರಣೆ ಮಾಡುತ್ತಿರುವುದು.



ರೆಡ್ ಕ್ರಾಸ್ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಮತ್ತು ಶ್ರೀ ಸಿದ್ಧಗಂಗಾ ಪದವಿ ಕಾಲೇಜುಗಳ ಸಂಯೋಜನಾಧಿಕಾರಿಗಳಾದ ಡಾ॥ ಡಿ.ಎನ್, ಯೋಗಿಶ್ವರಪ್ಪನವರೊಂದಿಗೆ ದಿನಸಿ ಕಿಟ್ ಗಳನ್ನು ವಿತರಣೆ ಮಾಡುತ್ತಿರುವುದು.






ಬೆಳಗುಂಬ ಬಳಿ ಇರುವ ಕಿವುಡ ಮತ್ತು ಅಂಧರ ಶಾಲೆಯಲ್ಲಿ ಉಸ್ತುವಾರಿಗಳು ವಿಶ್ರಾಂತ ಪ್ರಾಂಶುಪಾಲರಾದ ಪ್ರೊ. ಚಂದ್ರಣ್ಣನವರ ಮಾರ್ಗದರ್ಶನದಲ್ಲಿ ಎನ್.ಸಿ.ಸಿ. ವಿದ್ಯಾರ್ಥಿಗಳೊಂದಿಗೆ ದಿನಸಿ ಕಿಟ್ ಗಳನ್ನು ಪ್ಯಾಕ್ ಮಾಡುತ್ತಿರುವುದು.

ನಗರದ ಅಶೋಕ ರಸ್ತೆಯಲ್ಲಿರುವ ರೆಡ್ ಕ್ರಾಸ್ ಭವನದಲ್ಲಿ ಇತರೆ ಕೊರೋನಾ ಸೇನಾನಿಗಳೊಂದಿಗೆ ತರಕಾರಿ ಕಿಟ್ ಗಳನ್ನು ಪ್ಯಾಕ್ ಮಾಡುತ್ತಿರುವುದು.



ಕೊರೋನಾ ಸೇನಾನಿಗಳಾದ ಪತ್ರಿಕಾ ವರದಿಗಾರರಿಗೆ ಎನ್.ಸಿ.ಸಿ. ವಿದ್ಯಾರ್ಥಿಗಳು ಮತ್ತು ಇತರೆ ಅಧಿಕಾರಿಗಳೊಂದಿಗೆ ಎನ್.ಸಿ.ಸಿ ವಿದ್ಯಾರ್ಥಿಗಳೇ ತಯಾರಿಸಿದ ಮಾಸ್ಕ್ ಗಳನ್ನು ವಿತರಿಸುತ್ತಿರುವುದು.






ಭಾರತೀಯ ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ಕೋವಿಡ್-19 ರಿಂದ ತೊಂದರೆಗೀಡಾಗಿದ್ದ ಬಡವರಿಗೆ ಹೋಮ್ ಗಾರ್ಡ್ಸ್‌ನ ಮಾಜಿ ಕಮಾಂಡೆಂಟ್ ರಾಕ್‌ಲೈನ್ ರವಿಕುಮಾರ್ ರವರೊಂದಿಗೆ ದಿನಸಿ ಕಿಟ್‌ಗಳನ್ನು ವಿತರಿಸುತ್ತಿರುವುದು.




ಕೊರೋನಾ ಸೇನಾನಿಗಳಾದ ವೈದ್ಯಾಧಿಕಾರಿಗಳಿಗೆ ಎನ್.ಸಿ.ಸಿ. ವಿದ್ಯಾರ್ಥಿಗಳು ಮತ್ತು ಇತರೆ ಅಧಿಕಾರಿಗಳೊಂದಿಗೆ ಎನ್.ಸಿ.ಸಿ ವಿದ್ಯಾರ್ಥಿಗಳೇ ತಯಾರಿಸಿದ ಮಾಸ್ಕ್ ಗಳನ್ನು ಮತ್ತು ಸ್ಯಾನಿಟೈಸರ್ ವಿತರಿಸುತ್ತಿರುವುದು.

ನಗರದ ಸಿದ್ಧಾರ್ಥ ಇಂಜಿನೀಯಯರಿಂಗ್ ಕಾಲೇಜು ಮುಂಬಾಗ ಆರ್. ರಾಜೇಂದ್ರ ಅಭಿಮಾನಿ ಬಳಗ ಸಲ್ಲಿಸುತ್ತಿರುವು ಅವಿಸ್ಮರಣೀಯ ಸೇವೆ ಬಡವರಿಗೆ ಮತ್ತು ಹಸಿದವರಿಗೆ ಆಹಾರ ತಯಾರಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳೊಂದಿಗೆ ಕೆಲಸದ ಸಹಾಯ ಮಾಡುತ್ತಿರುವುದು.





ಆರ್. ರಾಜೇಂದ್ರ ಅಭಿಮಾನಿ ಬಳಗ ತಯಾರಿಸಿದ ಆಹಾರವನ್ನು ಪೊಟ್ಟಣಗಳಿಗೆ ತುಂಬಿ ವಿವಿಧ ಬಡಾವಣೆಗಳಲ್ಲಿನ ಬಡವರಿಗೆ ಮತ್ತು ಹಸಿದವರಿಗೆ ಪ್ಯಾಕ್ ಮಾಡಿದ ಆಹಾರದ ಪೊಟ್ಟಣಗಳನ್ನು ಚೀಲಕ್ಕೆ ತುಂಬುತ್ತಿರುವುದು.

**ಪತ್ರಿಕಾ ವರದಿ**



ಎನ್‌ಸಿಸಿ ಉತ್ತಮ ವಾರಿಯರ್ಸ್ ಪಡೆ



ಕರೋನಾ ವಾರಿಯರ್ಸ್‌ಆಗಿ ಎನ್.ಸಿ.ಸಿ. ವಿದ್ಯಾರ್ಥಿಗಳು

**ರೆಡ್ ಕ್ರಾಸ್ ನ ಸಭಾಪತಿಗಳು ಮತ್ತು ಇತರೆ ವೈದ್ಯರುಗಳಿಂದ ಒಂದು ವಾರದ ಕಾಲ ಬೆಳಿಗ್ಗೆ ಅಗತ್ಯ ವಸ್ತುಗಳನ್ನು ಕೊಳ್ಳಲು ಬರುವ ನಾಗರೀಕರಲ್ಲಿ ಜಾಗೃತಿ ಮೂಡಿಸುತ್ತಿರುವುದು.**



ವಿದ್ಯಾನಗರ ನಾಗರೀಕರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷರಾದ ಶ್ರೀಯುತ ಅಂಜಿನಪ್ಪ, ಮತ್ತು ವಿಶ್ರಾಂಥ ಪಾಂಶುಪಾಲರು ಮತ್ತು ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್. ಕುಮಾರಸ್ವಾಮಿ ಮತ್ತು ಬಡಾವಣೆಯ ಹಿರಿಯ ನಾಗರೀಕರ ಸಮ್ಮುಖದಲ್ಲಿ ಒಂದು ವಾರದ ಕಾಲ ಜಾಗೃತಿ ಕಾರ್ಯಕ್ರಮ ಏರ್ಪಡಿಸಿದ್ದು ರೆಡ್ ಕ್ರಾಸ್ ನ ರಾಜ್ಯಶಾಖೆ ಸಭಾಪತಿಗಳಾದ ಶ್ರೀ ಎಸ್. ನಾಗಣ್ಣನವರು ಕಾರ್ಯಕ್ರಮ ಉದ್ಧೇಶಿಸಿ ಪ್ರಸ್ತುತ ಜೀವ ಮತ್ತು ಜೀವನದ ಬಗ್ಗೆ ಅರಿವು ಮೂಡಿಸುವ ಮಾತನಾಡಿದರು. ಎನ್.ಸಿ.ಸಿ. ವಿದ್ಯಾರ್ಥಿಗಳೊಂದಿಗೆ ಜಾಗೃತಿ ಕಾರ್ಯಕ್ರಮ ಒಂದು ವಾರ ನಡೆಯಿತು.



ಎರಡನೇ ದಿನದ ಜಾಗೃತಿ ಕಾರ್ಯಕ್ರಮದಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷರು ಮತ್ತು ಮಹೇಶ್ ಸರ್ಜಿಕಲ್ ಕ್ಲಿನಿಕ್ ನ ಡಾ॥ ಮಹೇಶ್ ರವರು ಕೊರೋನ ಬರದಂತೆ ತಡೆಯುವ ಮಾರ್ಗಗಳನ್ನು ತಿಳಿಸಿದರು.

ಮೂರನೇ ದಿನದ ಜಾಗೃತಿ ಕಾರ್ಯಕ್ರಮದಲ್ಲಿ ತವರು ಜಿಲ್ಲೆಗೆ ಬಂಧಿದ್ದ ಮಂಡ್ಯದ ಸೊಸೆ ನಜೀರಾ ಬಾನು ಮತ್ತು ಅವರ ಪತಿ ಮಂಡ್ಯದಲ್ಲಿನ ಕೊರೋನಾ ಪರಿಸ್ಥಿತಿ ತುಮಕೂರಿಗೆ ಬರದಂತೆ ಹೆಚ್ಚರ ವಹಿಸುವಂತೆ ತಿಳಿಸಿದರು.





ನಾಲ್ಕನೇ ದಿನದ ಜಾಗೃತಿ ಕಾರ್ಯಕ್ರಮದಲ್ಲಿ ಗುಬ್ಬಿ ತಾಲ್ಲೂಕಿನಲ್ಲಿ ವೈದ್ಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ॥ ರಜನಿ ರವರೂ ಸಹ ಕೊರೋನಾದ ಬಗ್ಗೆ ಹೆಚ್ಚರವಿರಲಿ, ಭಯ ಬೇಡ ಎಂದು ತಿಳಿಸುತ್ತಾ ಮುಂಜಾಗೃತಾ ವಿಧಾನಗಳನ್ನು ತಿಳಿಸಿದರು.

ಕೊನೆಯದಾಗಿ ಮಾನ್ಯ ನಗರ ಶಾಸಕರು, ವಿದ್ಯಾನಗರ ನಾಗರೀಕ ಹಿತರಕ್ಷಣಾ ಸಂಘದ ಪದಾಧಿಕಾರಿಗಳು ಮಹಾನಗರ ಪಾಲಿಕೆ ನೌಕರರನ್ನು ಸನ್ಮಾನಿಸಿ ಅವರುಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರೆಡ್‌ಕ್ರಾಸ್‌ನ ಸಭಾಪತಿಗಳಾದ ಎಸ್. ನಾಗಣ್ಣನವರು ಭಾಗವಹಿಸಿದ್ದರು.






## ಕೊರೊನಾ ಸೋಂಕು ವಿರುದ್ಧ ಜಾಗೃತರಾಗಿ

ತುಮಕೂರು:



ಪ್ರಜಾ ಪ್ರಗತಿ ದಿನಪತ್ರಿಕೆಯ ಉಪಸಂಪಾದಕರಾದ ಶ್ರೀ ಟಿ.ಎನ್. ಮಧುಕರ್ ರವರಿಗೆ ಮತ್ತು ಇತರೆ ವರದಿಗಾರರಿಗೆ ವಿದ್ಯಾರ್ಥಿಗಳೇ ತಯಾರಿಸಿದ ಮಾಸ್ಕ್ ಗಳನ್ನು ವಿತರಿಸುತ್ತಿರುವುದು.

ತುಮಕೂರಿನ ಅಶೋಕ ರಸ್ತೆಯಲ್ಲಿರುವ ರೆಡ್ ಕ್ರಾಸ್ ಭವನದಲ್ಲಿ ಬಡವರಿಗೆ ದಿನಸಿ ಕಿಟ್ ಗಳನ್ನು ವಿತರಿಸುವ ಸಂದರ್ಭದಲ್ಲಿ ಎಲ್ಲರಿಗೂ ಉಷ್ಣಾಂಶ ಪರೀಕ್ಷೆ ಮತ್ತು ಸ್ಯಾನಿಟೈಸರ್ ಹಾಕುತ್ತಿರುವುದು.





ಆರ್ ರಾಜೇಂದ್ರ ಅಭಿಮಾನಿ ಬಳಗ ಆಹಾರ ಕಿಟ್ ಗಳನ್ನು ವಿತರಿಸುವ ಸಂದರ್ಭದಲ್ಲಿ ಎನ್.ಸಿ.ಸಿ. ವತಿಯಿಂದ ವಿದ್ಯಾರ್ಥಿಗಳೊಂದಿಗೆ ಕಾರ್ಯ ನಿರ್ವಹಿಸಿದ ಸಂದರ್ಭದಲ್ಲಿ ಆರ್. ರಾಜೇಂದ್ರರವರು ಕೊರೋನಾ ಸೇನಾನಿ ವಿದ್ಯಾರ್ಥಿಗಳನ್ನು ಅಭಿನಂದಿಸಿ ಸನ್ಮಾನಿಸಿದರು.



ಕೊರೋನಾ ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಡಾ॥ ಶ್ರೀಶ್ರೀ ಶಿವಕುಮಾರ ಮಹಾಸ್ವಾಮಿಗಳ ವೃತ್ತದಲ್ಲಿ ವಿದ್ಯಾರ್ಥಿಗಳು ಮತ್ತು ಪೋಲೀಸರೊಂದಿಗೆ ಅಣುಕು ಪ್ರದರ್ಶನದ ಮೂಲಕ ಜಾಗೃತಿ ಮೂಡಿಸುತ್ತಿರುವುದು.



ಕೊರೋನಾ ಸೋಂಕಿತ ವೃದ್ಧರೊಬ್ಬರಿಗೆ ರಕ್ತದಾನ ಮಾಡುತ್ತಿರುವ ಸಂದರ್ಭ.



ಎಸ್. ಎಸ್. ಎಲ್. ಸಿ. ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಲ್ಲಿ ಅಂತರ ಕಾಯ್ದುಕೊಳ್ಳುವಂತೆ ಮತ್ತು ಸ್ಯಾನಿಟೈಸರ್ ಬಳಸುವಂತೆ ಜಾಗೃತಿ ಮೂಡಿಸುತ್ತಿರುವುದು.







ಎಸ್.ಎಸ್.ಎಲ್.ಸಿ. ಪರೀಕ್ಷಾ ಸಂದರ್ಭದಲ್ಲಿ ಸಿದ್ಧಗಂಗಾ ಮಠದಲ್ಲಿ ಕೊರೋನಾ ಸೇನಾನಿಗಳಂತೆ ಕಾರ್ಯ ನಿರ್ವಹಿಸಿದ ಎನ್.ಸಿ.ಸಿ. ವಿದ್ಯಾರ್ಥಿಗಳೊಂದಿಗೆ

ಎಸ್.ಎಸ್.ಎಲ್.ಸಿ. ಪರೀಕ್ಷಾ ಸಂದರ್ಭದಲ್ಲಿ ಸಿದ್ಧಗಂಗಾ ಮಠಕ್ಕೆ ಬಂದು ಪರೀಕ್ಷಾ ಸಿದ್ಧತೆಗಳನ್ನು ಪರೀಕ್ಷಿಸಿದ ಘನ ಸರ್ಕಾರದ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಎಸ್. ಸುರೇಶ್ ಕುಮಾರ್ ರೊಂದಿಗೆ ಕೊರೋನಾ ಸೇನಾನಿಗಳಂತೆ ಕಾರ್ಯ ನಿರ್ವಹಿಸಿದ ಸಂದರ್ಭ.





ಎಸ್.ಎಸ್.ಎಲ್.ಸಿ. ಪರೀಕ್ಷಾ ಸಮಯದಲ್ಲಿ ಸಿದ್ಧಗಂಗಾ ಪಾರ್ಮಸಿ ಕಾಲೇಜು ಕಟ್ಟಡದಲ್ಲಿ ನಡೆಯುತ್ತಿದ್ದ ಪರೀಕ್ಷಾ ಕೇಂದ್ರಕ್ಕೆ ಘನ ಸರ್ಕಾರದ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಎಸ್. ಸುರೇಶ್ ಕುಮಾರ್ ಬೇಟಿ ನೀಡಿದ ಸಂದರ್ಭದಲ್ಲಿ.

# ಮನದ ಮಾತು : (Word of Mind)

ಈ ಒಂದು ಅನೀರೀಕ್ಷಿತ ಮತ್ತು ಭಯಾನಕ ವೈರಸ್ ಕೋವಿಡ್ – 19 ಇಡೀ ಪ್ರಪಂಚದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಎಲ್ಲಾ ರೀತಿಯಲ್ಲೂ ಅಲ್ಲೋಲ ಕಲ್ಲೋಲ ಉಂಟು ಮಾಡಿ ಜನ ಜೀವನ ಅಸ್ತವಸ್ತವನ್ನಾಗಿಸಿದ್ದು ವಿದ್ಯಾವಂತನಾಗಿ, ಪ್ರಜ್ಞಾವಂತನಾಗಿ, ಜ್ಞಾನಾರ್ಜನೆಯನ್ನು ನೀಡಿ ಉತ್ತಮ ನಾಗರೀಕನನ್ನಾಗಿ ರೂಪಿಸುವ ಶೈಕ್ಷಣಿಕ ಸಂಸ್ಥೆಯೆಂಬ ಕೈಗಾರಿಕೆಯಲ್ಲಿ ಸಹಾಯಕ ಪ್ರಾಧ್ಯಾಪಕನಾಗಿ ಕಾರ್ಯ ನಿರ್ವಹಿಸುತ್ತಿರುವವಾಗ ಅನೀರೀಕ್ಷಿತವಾಗಿ ನನ್ನ ಸೇವೆಯನ್ನು ಗಮನಿಸಿದ ಸಂಸ್ಥೆಯ ಮುಖ್ಯಸ್ಥರು ಅನೇಕ ಪಠ್ಯೇತರ ಚಟುವಟಿಕೆಗಳನ್ನು ನನ್ನ ಹೆಗಲಿಗೆ ಹಾಕಿದಾಗ ಅವುಗಳನ್ನು ಸಮರ್ಥವಾಗಿ ನಿರ್ವಹಿಸಿದ್ದು ಮತ್ತು ಅವರುಗಳಿಂದ ಪ್ರಶಂಸೆಗೊಳಗಾಗಿ ಎನ್.ಎಸ್.ಎಸ್., ನ ಕಾರ್ಯಕ್ರಮಾಧಿಕಾರಿಯಾಗಿ  ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿಯಾಗಿ, ಎನ್.ಸಿ.ಸಿ. ವಿಭಾಗದಲ್ಲಿ ಸಹಾಧಿಕಾರಿಯಾಗಿ ಸುಮಾರು ಹದಿನೈದು ವರ್ಷಗಳ ಕಾಲ ಯುವ ವಿದ್ಯಾರ್ಥಿ ಪಡೆಯೊಂದಿಗೆ ಕಾರ್ಯ ನಿರ್ವಹಿಸಿದ ಅನುಭವದ ಆಧಾರದ ಮೇಲೆ ಈ ಒಂದು ಮಹಾ ಮಾರಿ ವೈರಸ್ ನಿಂದ ತೊಂದರೆಗೊಳಗಾದ ನಾಗರೀಕರಿಗೆ ಸಹಾಯ ಮಾಡುವ ಸಲುವಾಗಿ ಒಂದು ಯುವ ವಿದ್ಯಾರ್ಥಿ ಪಡೆ ನಿರ್ಮಿಸಿಕೊಂಡು ಸುಮಾರು ಮೂರು ತಿಂಗಳುಗಳ ಕಾಲ ಸ್ವಯಂಪ್ರೇರಿತರಾಗಿ ಮತ್ತು ಇತರೆ ಸಂಸ್ಥೆಗಳೊಂದಿಗೆ (ಆರ್.ಆರ್. ಅಭಿಮಾನಿ ಬಳಗ, ರೆಡ್ ಕ್ರಾಸ್ ಸಂಸ್ಥೆ, ಎನ್.ಸಿ.ಸಿ. ಸಂಸ್ಥೆ, ಸಿದ್ಧಗಂಗಾ ಮಠ ಮತ್ತು ವಿದ್ಯಾನಗರ ನಾಗರೀಕರ ಕ್ಷೇಮಾಭಿವೃದ್ಧಿ ಸಂಘ) ಕೈಜೋಡಿಸಿ ಅವರೊಟ್ಟಿಗೆ ಕೊರೋನಾ ಸೇನಾನಿಯಾಗಿ ಕಾರ್ಯ ನಿರ್ವಹಿಸಿದ ತೃಪ್ತಿ ನನಗಿದೆ.

ಈ ಕಾರ್ಯದಲ್ಲಿ ಮನೆಯಿಂದ ಹೊರ ಬಂಧು ಕಾರ್ಯ ನಿರ್ವಹಿಸಲು ಸಹಕರಿಸಿದ ಕುಟುಂಬ ಸದಸ್ಯರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತಾ, ಅದೇ ರೀತಿ ಯಾವುದೇ ಸಂದರ್ಭದಲ್ಲಿ ಕಾರ್ಯ ನಿರ್ವಹಿಸಲು ಕರೆ ಕೊಟ್ಟಾಗ ಕ್ಷಣಾರ್ಧದಲ್ಲಿ ನನ್ನ ಜೊತೆ ಕೈ ಜೋಡಿಸಿದ ನನ್ನ ಯುವ ಪಡೆ ಮತ್ತು ಸಮಾನ ಮನಸ್ಕ ಮಿತ್ರರಿಗೆ ನಾನು ಅಭಾರಿಯಾಗಿದ್ದೇನೆ.


ಸಾಮಾಜಿಕ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲು ಸಹಕರಿಸಿದ ಮಾನ್ಯ ಪ್ರಾಂಶುಪಾಲರುಗಳಾದ ಡಾ॥ ಆರ್. ಆನಂದಕುಮಾರಿ ಮತ್ತು ಶ್ರೀಮತಿ ರತ್ನಮಂಜರಿ ಕೆ.ಜಿ ರವರುಗಳಿಗೆ ಹಾಗೂ ಸದಾ ನನಗೆ ಸ್ಪೂರ್ತಿ ನಿಡುತ್ತಾ, ಸಹಕಾರ ನೀಡುತ್ತಿದ್ದ ಎಲ್ಲಾ ನನ್ನ ಸಹದ್ಯೋಗಿ ಮಿತ್ರರಿಗೆ ನಾನು ಚಿರರುಣಿಯಾಗಿರುತ್ತೇನೆ.

*ವಂದನಾಪೂರ್ವಕ ನಮಸ್ಕಾರಗಳೊಂದಿಗೆ.*

**ರಾಮಲಿಂಗರೆಡ್ಡಿ ಎಸ್.**



ISO 9001:2008 Certified College
NAAC Re-Accredited B+ Grade
The Muktainagar Taluka Education Society's
**Smt. Godavaribai Ganpatrao Khadse College**
Muktainagar (Dist-Jalgaon, Maharashtra, India)



## COVID-19 Awareness Program - Online Quiz

# Certificate Of Appreciation
## Presented To

*Mr./Ms* *Lt. RAMALINGA REDDY S* **for *successful* completion of "COVID-19 Awareness Program- Online Quiz" jointly organized by Internal Quality Assurance Cell (IQAC) and Department of Marathi of Smt. G. G. Khadse College, Muktainagar.**

| | | |
|---|---|---|
| **Dr. A. P. Patil** | **Mrs. C.D. Kharche** | **Prin. V. R. Patil** |
| IQAC Co-Ordinator | Head,Department Of Marathi | Principal |